# ಹೊಸತಲೆಮಾರಿನ ಕನ್ನಡ ಸಣ್ಣಕತೆಗಳು: ಕುಟುಂಬದ ಪರಿಕಲ್ಪನೆ

**ಕಿರಣಕುಮಾರ್ ಹೆಚ್.ಜಿ.**

ಸಹಾಯಕ ಪ್ರಾಧ್ಯಾಪಕರು, ಕ್ರಿಸ್ತು ಜಯಂತಿ ವಿಶ್ವವಿದ್ಯಾಲಯ, ಕೆ. ನಾರಾಯಣಪುರ, ಬೆಂಗಳೂರು.

**DOI: https://doi.org/10.5281/zenodo.18470629**

## ABSTRACT:

ಕನ್ನಡ ಸಾಹಿತ್ಯದ ಸಣ್ಣಕತೆಗಳು ಬದಲಾಗುತ್ತಿರುವ ಸಾಮಾಜಿಕ ಮತ್ತು ಕೌಟುಂಬಿಕ ಮೌಲ್ಯಗಳನ್ನು ಸಮರ್ಥವಾಗಿ ಚಿತ್ರಿಸಿವೆ. ಜಾಗತೀಕರಣ ಹಾಗೂ ಆಧುನಿಕ ಜೀವನಶೈಲಿಯ ಪ್ರಭಾವದಿಂದಾಗಿ, ಭಾರತೀಯ ಪರಂಪರೆಯ ಅವಿಭಕ್ತ ಕುಟುಂಬ ವ್ಯವಸ್ಥೆಯು ಕುಸಿಯುತ್ತಿದ್ದು, ವಿಭಕ್ತ ಕುಟುಂಬಗಳೂ ಛಿದ್ರಗೊಂಡು ವ್ಯಕ್ತಿಗತ ಬದುಕಿನತ್ತ ಸಾಗುತ್ತಿವೆ. ಶಿಕ್ಷಣ, ಉದ್ಯೋಗ, ಆಸ್ತಿ ವ್ಯಾಮೋಹ ಹಾಗೂ ಮೂಢನಂಬಿಕೆಗಳು ರಕ್ತಸಂಬಂಧಗಳ ನಡುವಿನ ಭಾವನಾತ್ಮಕ ಬೆಸುಗೆಯನ್ನು ಹೇಗೆ ಸಡಿಲಗೊಳಿಸುತ್ತಿವೆ ಎಂಬುದನ್ನು ಅಮರೇಶ ನುಗಡೋಣಿ, ವಸುಧೇಂದ್ರ, ಟಿ.ಎಸ್. ಗೊರವರ ಮತ್ತು ಎಂ.ಎಸ್. ವೇದಾ ಅವರ ಕತೆಗಳ ಹಿನ್ನೆಲೆಯಲ್ಲಿ ಇಲ್ಲಿ ವಿಶ್ಲೇಷಿಸಲಾಗಿದೆ. ಕೌಟುಂಬಿಕ ಸಾಮರಸ್ಯವು ಮರೆಯಾಗಿ, ಸ್ವಾರ್ಥ ಮತ್ತು ಆರ್ಥಿಕ ಲಾಭಕ್ಕಾಗಿ ಮಾನವೀಯ ಸಂಬಂಧಗಳು ಹೇಗೆ ನಶಿಸುತ್ತಿವೆ ಹಾಗೂ ಪೋಷಕರು ಮತ್ತು ಮಕ್ಕಳ ನಡುವಿನ ಅಂತರ ಹೇಗೆ ಹೆಚ್ಚುತ್ತಿದೆ ಎನ್ನುವ ವರ್ತಮಾನದ ಕಟು ವಾಸ್ತವವನ್ನು ಸಣ್ಣಕತೆಗಳು ದಾಖಲಿಸಿರುವ ಬಗೆಯನ್ನು ಇಲ್ಲಿ ಚರ್ಚಿಸಲಾಗಿದೆ.

## KEYWORDS:

ಕನ್ನಡ ಸಣ್ಣಕತೆಗಳು, ಕುಟುಂಬದ ಪರಿಕಲ್ಪನೆ, ಜಾಗತೀಕರಣ, ಸಂಬಂಧಗಳ ಸಂಘರ್ಷ, ಆಧುನಿಕತೆ.

ಕನ್ನಡ ಸಾಹಿತ್ಯದಲ್ಲಿ ಸಣ್ಣಕತೆ ಪ್ರಕಾರವು ಬಹಳ ವಿಶಾಲವಾದ ಹರವನ್ನು ಹೊಂದಿದೆ. ಪ್ರಾಚೀನ ಕಾಲದಿಂದಲೂ ಸಣ್ಣಕತೆ ಪ್ರಕಾರವು ಕನ್ನಡದಲ್ಲಿ ಇದ್ದಿತಾದರೂ ಅದು ನಿರ್ದಿಷ್ಟವಾದ ರೂಪುರೇಷೆಯನ್ನು, ಚೌಕಟ್ಟನ್ನು ಹೊಂದಿರಲಿಲ್ಲ. 18ನೇ ಶತಮಾನದಲ್ಲಿ ಬ್ರಿಟಿಷರಿಂದ ಪರಿಚಿತವಾದ ಇಂಗ್ಲಿಷ್ ಸಾಹಿತ್ಯದ ಪ್ರಭಾವ ಮತ್ತು ಪ್ರೇರಣೆಯಿಂದ ಕನ್ನಡ ಸಾಹಿತ್ಯಕ್ಕೆ ಅನೇಕ ರೀತಿಯ ಅನುಕೂಲಗಳು ಉಂಟಾದವು. ಅಲ್ಲದೇ 18ನೇ ಶತಮಾನದವರೆಗೂ ಕನ್ನಡ ಸಾಹಿತ್ಯದ ರಚನೆಯಲ್ಲಿ ಇದ್ದ ಅನೇಕ ಅಂಶಗಳು ಈ ಹಂತದಲ್ಲಿ ಬದಲಾವಣೆಗೊಂಡು ಹೊಸತೊಂದು ರೂಪವನ್ನು ಪಡೆದು ಸಾಹಿತ್ಯ ಮತ್ತು ಸಾಂಸ್ಕೃತಿಕ ವಾತಾವರಣದಲ್ಲೂ ಅನೇಕ ಪಲ್ಲಟಗಳುಂಟಾದವು. ಈ ಹಿಂದಿನ ಸಾಹಿತ್ಯದಲ್ಲಿ ಕೇವಲ ರಾಜ, ಧರ್ಮ, ಪುರಾಣ ಹೀಗೆ ಕೆಲವೇ ಕೆಲವು ವಸ್ತು ಮತ್ತು ಆಶಯಗಳಿಗೆ ಸಂಬಂಧಿಸಿದಂತೆ ಕೃತಿಗಳು ರಚನೆಯಾಗುತ್ತಿದ್ದವು. ಆದರೆ ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ ವಸ್ತು ಮತ್ತು ಆಶಯ, ಶೈಲಿ, ಸ್ವರೂಪ ಹೀಗೆ

ಎಲ್ಲಾ ಅಂಶಗಳಿಂದಲೂ ಕೂಡ ಸಾಹಿತ್ಯ ರಚನೆಯು ಭಿನ್ನವಾಗಿ ರೂಪುಗೊಂಡಿತು. ಈ ಹಿಂದೆ ಇದ್ದ ಕಾವ್ಯ ಎನ್ನುವ ಪ್ರಕಾರವೇ ಅಧಿಕವಾಗಿ ಗದ್ಯವು ಅಲ್ಲಲ್ಲಿ ವಚನ ಎಂಬರ್ಥದಲ್ಲಿ ಬಳಕೆಯಾಗುತ್ತಿತ್ತು. ಕಾದಂಬರಿ, ಕತೆ, ನಾಟಕ ಎಂಬ ಎಲ್ಲ ಪ್ರಕಾರಗಳೂ ಕಾವ್ಯದಿಂದಲೇ ರಚನೆಗೊಳ್ಳುತ್ತಿದ್ದವು. ಇಂಗ್ಲಿಷ್ ಶಿಕ್ಷಣ ಮತ್ತು ಸಾಹಿತ್ಯದ ಪ್ರಭಾವ ಮತ್ತು ಪ್ರೇರಣೆಯಿಂದ ಪ್ರಕಾರಗಳನ್ನು ಕೂಡ ಯಥಾವತ್ತಾಗಿ ಅನುಕರಣೆ ಮಾಡುವ ಕೆಲಸವು ನಡೆಯಿತು. ಈ ಎಲ್ಲಾ ಪೂರಕ ಅಂಶಗಳಿಂದ ಕನ್ನಡಕ್ಕೆ ಸಣ್ಣಕತೆ, ಕಾದಂಬರಿ, ಭಾವಗೀತೆ ಎಂಬ ಹತ್ತು ಹಲವು ಪ್ರಕಾರಗಳು ನಿರ್ದಿಷ್ಟ ಚೌಕಟ್ಟು ಮತ್ತು ಆಯಾಮಗಳಿಂದ ರಚನೆಗೊಂಡು ಪ್ರಸಿದ್ಧಿಯನ್ನು ಪಡೆದುದು ಈಗ ನೆನಪು ಮಾತ್ರ.

ಆಧುನಿಕ ಕನ್ನಡದ ಕತೆಗಳು ನವೋದಯ ಪೂರ್ವ ಕಾಲದಿಂದಲೂ ಸಮಾಜದಲ್ಲಿನ ಅನೇಕ ವಸ್ತು–ವಿಷಯಗಳನ್ನು ತನ್ನ ಒಡಲಾಳದಲ್ಲಿ ಇಟ್ಟುಕೊಂಡು ರಚನೆಗೊಂಡಿವೆ. ಸಣ್ಣಕತೆಯ ವ್ಯಾಪ್ತಿಯು ಕೂಡ ಚಿಕ್ಕದು. ಸರಳವಾಗಿ ಒಂದೆರಡು ಗಂಟೆಗಳಲ್ಲಿ ಚಿಕ್ಕ ವಸ್ತುವಿನಿಂದ ಹಿಡಿದು ಅಗಾಧ ಗಂಭೀರವಾದ ವಸ್ತುವಿಷಯಗಳನ್ನು ಕೂಡ ಮುಟ್ಟಿಸಬಲ್ಲ ಶಕ್ತಿಯುತವಾದವು. ಕಥಾ ಸಂವಿಧಾನ, ನಿರೂಪಣೆ, ಪಾತ್ರಗಳ ನಿರ್ವಹಣೆ ಹೀಗೆ ನಾನಾ ವಿಷಯಗಳು ಇಲ್ಲಿ ಮುಖ್ಯ ಪಾತ್ರವನ್ನು ವಹಿಸಿವೆ. ಭಾರತದ ಸಮಾಜವು ಸಾಮಾಜಿಕವಾಗಿ ಒಂದು ಬದಲಾವಣೆಗೆ ಒಳಪಡದಿರುವ ಸ್ಥಿತಿಯಲ್ಲಿತ್ತು. ಇಂತಹ ಸಂದರ್ಭದಲ್ಲಿ ಬಂದ ಆಧುನಿಕ ಚಿಂತನೆಗಳು ಭಾರತೀಯ ತನು–ಮನಗಳನ್ನು ಮುಟ್ಟುವಲ್ಲಿ ಅನೇಕ ದಶಕಗಳೇ ಕಳೆದಿವೆ. ಅನೇಕ ಅಂಧ ನಂಬಿಕೆಗಳನ್ನು ಒಳಗೊಂಡಿದ್ದ ಭಾರತೀಯ ಸಾಂಪ್ರದಾಯಿಕ ಸಮಾಜದಲ್ಲಿ ಇದ್ದ ಬಾಲ್ಯವಿವಾಹ, ವಿಧವಾ ವಿವಾಹ, ಜಾತಿ, ಮತ, ಧರ್ಮ, ಮೇಲು–ಕೀಳು, ಬಡವ–ಶ್ರೀಮಂತ ಹೀಗೆ ನಾನಾ ವಿವಿಧ ಸಮಸ್ಯೆಗಳನ್ನು ಕೇಂದ್ರೀಕರಿಸಿ ಕತೆಗಳು ಹುಟ್ಟಿಕೊಂಡವು. ಸಮುದ್ರವನ್ನು ದಾಟಿ ಹೋದರೆ ಮೈಲಿಗೆಯಾಗಿ ಹೋಗುತ್ತೇವೆ ಎಂಬ ಕಾರಣದಿಂದ ಎಷ್ಟೋ ವರ್ಷಗಳ ಕಾಲ ದೇಶವನ್ನು ಬಿಟ್ಟು ಹೋಗಿರಲಿಲ್ಲ ಎಂಬ ಆಲೋಚನೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ನಮ್ಮ ಬದಲಾವಣೆಗೆ ಅನೇಕ ಸಾಮಾಜಿಕ ಹಾಗೂ ಸಾಂಸ್ಕೃತಿಕವಾದ ಸನ್ನಿವೇಶಗಳು ಹಾಗೂ ಅನಿವಾರ್ಯತೆಗಳು ಇರಲೇಬೇಕು ಎಂಬ ಅಂಶಗಳನ್ನು ತಿಳಿಯಲು ಸಾಧ್ಯವಾಗುತ್ತದೆ.

ಕುಟುಂಬವು ಸಮಾಜದಲ್ಲಿ ವಾಸಿಸುತ್ತಿರುವ ಮಾನವನ ಅವಿಭಾಜ್ಯ ಅಂಗವಾಗಿದೆ. ಕುಟುಂಬದ ಪಾತ್ರ ಸಾಮಾಜಿಕ ವ್ಯವಸ್ಥೆಯಲ್ಲಿ ಅತೀ ಮುಖ್ಯ ಪ್ರಧಾನ ಪಾತ್ರವನ್ನು ವಹಿಸಿಕೊಳ್ಳುತ್ತದೆ. ಪ್ರಾಚೀನ ಕಾಲದಿಂದ ಹಿಡಿದು ಇಂದಿನ ಆಧುನೀಕರಣದ ಸಂದರ್ಭದವರೆಗೂ ಕುಟುಂಬ ಎಂಬ ಚೌಕಟ್ಟಿನ ಒಳಗೆ ಮನುಷ್ಯ ತನ್ನ ಬದುಕನ್ನು ಕಟ್ಟಿಕೊಳ್ಳುವ ಪ್ರಯತ್ನವನ್ನು ಮಾಡುತ್ತಲೇ ಬಂದಿದ್ದಾನೆ. ಆದರೆ ಅಂದಿನಿಂದ ಇಂದಿನವರೆಗೆ ಕುಟುಂಬದ ಪರಿಕಲ್ಪನೆಗೆ ನಾವು ಸ್ಥಿರತೆಯನ್ನು ನೋಡಿಕೊಂಡು ಬರಲು ಸಾಧ್ಯವಾಗದೇ ಅದು ಚಲನಶೀಲತೆಯನ್ನು ಹೊಂದಿರುವುದನ್ನು ಕಾಣಲು ಸಾಧ್ಯವಾಗಿದೆ. ಕುಟುಂಬ ಎಂಬ ಸಂಸ್ಥೆಯು ವ್ಯಕ್ತಿಯ ಏಳ್ಗೆಗೆ ಹಾಗೂ ಅವನ ಬೆಳವಣಿಗೆಗೆ ಪೂರಕವಾಗಿ ಕೆಲಸ ಮಾಡುವ ಬಹುದೊಡ್ಡ ಶಕ್ತಿ ಎಂಬ ಅಂಶವನ್ನು

ನಾವು ತಿಳಿದಿದ್ದೇವೆ. ಇಂತಹ ಕುಟುಂಬದ ಮೂಲಮುಖ್ಯ ಕಾರ್ಯವೈಖರಿಗಳಲ್ಲಿ ಇಂದು ಅನೇಕ ಬದಲಾವಣೆಗಳು ಉಂಟಾಗಿ ಕುಟುಂಬದ ಪರಿಕಲ್ಪನೆಯೇ ನಾಶವಾಗುವ ಹಂತದಲ್ಲಿದ್ದು ಮತ್ತೆ ಏಕಾಂಗಿಯಾಗಿ ಉಳಿಯುವ ಸ್ಥಿತಿಯಲ್ಲಿರುವುದು ದುರಂತವಾಗಿದೆ. ಈ ಹಿನ್ನೆಲೆಯಲ್ಲಿ ಕುಟುಂಬದ ಈ ಎಲ್ಲಾ ಪಲ್ಲಟಗಳಿಗೆ ಕಾರಣ, ಪ್ರಭಾವ ಮತ್ತು ಪರಿಣಾಮಗಳನ್ನು ಭಿನ್ನ ಜ್ಞಾನಶಿಸ್ತುಗಳು ಅಧ್ಯಯನ ಮಾಡಿದಾಗ್ಯೂ ಕನ್ನಡ ಸಾಹಿತ್ಯವು ಅದನ್ನು ಆಳ-ಅಗಲಗಳನ್ನು ಮೂಲಬೇರಿನಿಂದ ತಿಳಿಯುವ ಅದಕ್ಕೆ ಪರಿಹಾರವನ್ನು ಸೂಕ್ಷ್ಮವಾಗಿ ತಿಳಿಸುವ ಕೆಲಸವನ್ನು ಮಾಡಿಕೊಂಡು ಬಂದಿರುವುದನ್ನು ಗಮನಿಸಬಹುದು.

**ಕುಟುಂಬದ ನಿರ್ವಚನ**

ಕುಟುಂಬದ ಪರಿಕಲ್ಪನೆಯು ಪ್ರಾಚೀನ ಕಾಲದಿಂದಲೂ ಭಾರತದಲ್ಲಿದೆ. ಕುಟುಂಬ ಸಾಮಾಜಿಕ ಸಂಸ್ಥೆಯ ಜೊತೆಗೆ ವ್ಯಕ್ತಿಯ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ನಿರ್ಮಿಸಿಕೊಡುತ್ತದೆ. ಇಲ್ಲಿ ಒಂದೇ ಸೂರಿನಲ್ಲಿ ಎರಡು ಮೂರು ತಲೆಮಾರಿನ ಜನರು ವಾಸಿಸುವುದನ್ನು ಅವಿಭಕ್ತ ಕುಟುಂಬ ಎಂಬರ್ಥದಲ್ಲಿ ಸಮಾಜಶಾಸ್ತ್ರವು ಹೇಳಿಕೆಯನ್ನು ನೀಡಿತ್ತು. ಈ ಕುಟುಂಬದಲ್ಲಿ ಸಂಗಾತಿ, ವಿವಾಹ, ವಂಶಾವಳಿ, ಒಂದೆಡೆ ವಾಸ ಮುಂತಾದ ಸಾಮಾನ್ಯ ಲಕ್ಷಣಗಳನ್ನು ಒಳಗೊಂಡಿರುತ್ತದೆ. ಸಮಾಜಶಾಸ್ತ್ರದ ಪರಿಕಲ್ಪನೆಯಲ್ಲಿ ಕುಟುಂಬವು ಒಂದು ಸಾಮಾಜಿಕ ಸಂಸ್ಥೆಯಾಗಿದೆ. ಅದು ತನ್ನ ಸಂಘಟನೆಯ ಮೂಲಕ ಕುಟುಂಬದ ಸದಸ್ಯರ ರಕ್ಷಣೆ, ಆರೈಕೆ, ಆರ್ಥಿಕತೆ, ಸಾಮಾಜೀಕರಣದ ಭಾಗವಾದ ಮಕ್ಕಳ ಲಾಲನೆ-ಪಾಲನೆ ಮುಂತಾದ ಕೆಲಸಗಳನ್ನು ನಿರ್ವಹಿಸುತ್ತದೆ ಎಂಬ ತಿಳುವಳಿಕೆಯಿದೆ. ಕುಟುಂಬ ವ್ಯವಸ್ಥೆಯು ಪರಂಪರೆಯಿಂದ ಬಂದಿರುವ ತನ್ನ ಧಾರ್ಮಿಕ ಆಚರಣೆಗಳನ್ನು, ನಂಬಿಕೆಗಳನ್ನು, ಸಂಪ್ರದಾಯಗಳನ್ನು, ರೀತಿ-ರಿವಾಜುಗಳನ್ನು ಮುನ್ನೆಡೆಸಿಕೊಂಡು ಬರುತ್ತಿರುತ್ತದೆ. ಇಂತಹ ಕುಟುಂಬದಲ್ಲಿ ಪ್ರೀತಿ, ವಿಶ್ವಾಸ, ಸಹಾಯ, ಸಹಕಾರದಂತಹ ಭಾವನಾತ್ಮಕ ವಿಷಯಗಳು ಕಾಲದಿಂದ ಕಾಲಕ್ಕೆ ಮುನ್ನೆಡೆದು ಸಾಗುತ್ತಿರುತ್ತವೆ.

ಭಾರತದಲ್ಲಿ ಪ್ರಾಚೀನ ಕಾಲದಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆಯು ಜಾರಿಯಲ್ಲಿದ್ದಿತು. 18ನೇ ಶತಮಾನದಲ್ಲಿ ಆದ ವಸಾಹತುಶಾಹಿಯ ಹಲವು ಪಲ್ಲಟಗಳಿಂದಾಗಿ ಈ ಅವಿಭಕ್ತ ಕುಟುಂಬದ ಪರಿಕಲ್ಪನೆಯು ಒಡೆದುಹೋಗಿ ವಿಭಕ್ತ ಕುಟುಂಬಗಳು ಹುಟ್ಟಿಕೊಂಡದ್ದನ್ನು ನೋಡಬಹುದು. ಈ ವಿಭಕ್ತ ಕುಟುಂಬದಲ್ಲಿ ತಂದೆ-ತಾಯಿ ಮತ್ತು ಮಕ್ಕಳು ಮಾತ್ರ ಇರುವುದನ್ನು ವಿಭಕ್ತ ಕುಟುಂಬ ಎಂದು ಕರೆಯಲಾಗಿದೆ. ಆದರೆ ಇಂದು ಇಂತಹ ಕುಟುಂಬ ವ್ಯವಸ್ಥೆಯು ಕುಟುಂಬದ ಒಳಗಿನ ಇಲ್ಲವೇ ಹೊರಗಿನ ಅನೇಕ ಪರಿಣಾಮಗಳಿಂದಾಗಿ ಇಂದು ಪಲ್ಲಟಗಳನ್ನು ಕಂಡುಕೊಳ್ಳುತ್ತಿದೆ. ಭಾರತದಂತಹ ಹಳ್ಳಿಗಳಿಂದಲೇ ತುಂಬಿಕೊಂಡಿರುವ ದೇಶದಲ್ಲಿ ಕುಟುಂಬದ ಪ್ರಭಾವವು ಯಥೇಚ್ಛವಾಗಿತ್ತು. ಇಂತಹ ಕುಟುಂಬ ವ್ಯವಸ್ಥೆಯಲ್ಲಿ ಪುರುಷಪ್ರಧಾನ ನಿಯಂತ್ರಣವು ಯಾಜಮಾನ್ಯದ ಸ್ಥಿತಿಯನ್ನು ಹೊಂದಿತ್ತು. ಅಲ್ಲದೇ

ಇಲ್ಲಿ ಏಕವ್ಯಕ್ತಿ ಪ್ರಾಧಾನ್ಯತೆಯಿಂದ ಈ ಯಜಮಾನಿಕೆಯು ಕೂಡಿದ್ದು, ಕುಟುಂಬದ ಸದಸ್ಯರ ಮೇಲೆ ನಿಯಂತ್ರಣವನ್ನು ಸಾಧಿಸಲಾಗುತ್ತಿದ್ದಿತು. ಕುಟುಂಬದ ಸ್ವರೂಪವನ್ನು ಪಲ್ಲಟಗೊಳಿಸಿದ್ದು ಭಾರತದ ಮೇಲೆ ಬ್ರಿಟಿಷರ ವಸಾಹತುಶಾಹಿ ನೀತಿಯ ಪರಿಣಾಮ. ಅಲ್ಲದೇ ಪ್ರಸ್ತುತ ಆಧುನಿಕ ಜಾಗತೀಕರಣ ಸಂದರ್ಭದಲ್ಲಿ ಕುಟುಂಬಗಳು ಕಣ್ಮರೆಯಾಗುತ್ತಿದ್ದು, ಏಕವ್ಯಕ್ತಿ ಪ್ರಾಧಾನ್ಯತೆಯನ್ನು ಇಲ್ಲವೇ ಏಕವ್ಯಕ್ತಿ ಕುಟುಂಬಗಳನ್ನು ಇಂದು ನೋಡಲು ಸಾಧ್ಯವಾಗುತ್ತಿದೆ. ಇಂತಹ ವೈರುಧ್ಯ ಪರಿಸ್ಥಿತಿಯನ್ನು ವರ್ತಮಾನದ ಕತೆಗಾರರು ತಮ್ಮ ಕತೆಗಳಲ್ಲಿ ಸೂಕ್ಷ್ಮ ಒಳನೋಟದಿಂದ ಗ್ರಹಿಸಿದ್ದಾರೆ.

ಮಾನವ ಇಷ್ಟೆಲ್ಲಾ ಬದಲಾವಣೆಗಳಿಗೆ ಏಕಾಏಕಿ ಒಳಗಾಗಲು ಸಾಧ್ಯವಿಲ್ಲ. ಕುಟುಂಬದ ಮೂಲಭೂತ ಶಕ್ತಿಸಾಮರ್ಥ್ಯವೇ ಅಲ್ಲಿರುವ ಸಾಮರಸ್ಯಭರಿತವಾದ ಒಗ್ಗಟ್ಟು. ಇಂದಿನ ದಿನಮಾನಗಳಲ್ಲಿ ಆ ಒಗ್ಗಟ್ಟು ಕುಸಿಯುತ್ತಿರುವುದಕ್ಕೆ ಆಧುನಿಕವಾದ ದೃಷ್ಟಿಕೋನ ಹಾಗೂ ನಶಿಸುತ್ತಿರುವ ಪರಂಪರೆಯ ಮನಸ್ಥಿತಿಯು ಕಾರಣವಾಗಿದೆ. ಮೌಲ್ಯಯುತ ಜೀವನ ವಿಧಾನವು ಕಳೆದುಹೋಗಿ ಇಂದಿನ ಯಾಂತ್ರಿಕ ಜೀವನ ವಿಧಾನವು ಮುನ್ನೆಲೆಗೆ ಬರುತ್ತಿದೆ. ಇದಕ್ಕೆಲ್ಲ ಮೂಲಭೂತವಾದ ಕಾರಣವೆಂದರೆ ಶಿಕ್ಷಣ ಪದ್ಧತಿ, ಆಧುನಿಕತೆ, ನಶಿಸುತ್ತಿರುವ ಸಾಮಾಜಿಕ ಮೌಲ್ಯಗಳು, ಹಿರಿಯರ ಬಗ್ಗೆ ಅಸಡ್ಡೆ, ಆರ್ಥಿಕ ಕಾರಣಕ್ಕಾಗಿ ಉದ್ಯೋಗವನ್ನು ಅರಸಿಕೊಂಡು ಹೋಗುತ್ತಿರುವುದು ಒಂದು ನೆಲೆಯಾದರೆ, ಮನುಷ್ಯನ ಸ್ವಾರ್ಥಗುಣ, ಆಸೆ ಪ್ರವೃತ್ತಿ, ಸಂಪತ್ತಿಗಾಗಿ ಕುಟುಂಬದಿಂದ ದೂರ ಉಳಿಯುತ್ತಿರುವುದು ಇನ್ನೂ ಮುಂತಾದ ಹತ್ತಾರು ಕಾರಣಗಳು ಇರುವುದನ್ನು ಸೂಕ್ಷ್ಮವಾಗಿ ತಿಳಿಯಬಹುದು. ಪ್ರೊ. ರಾಜೇಂದ್ರ ಚೆನ್ನಿ ಅವರು ಕೂಡ ಇದೇ ಒಳನೋಟವನ್ನು ನೀಡಿದ್ದಾರೆ. “ಜಾಗತೀಕರಣವು ಒಂದು ಜಗತ್ತನ್ನು, ಸಾವಿರಾರು ವರ್ಷದವರೆಗೆ ತಾಳಿಕೊಂಡು ಬಂದಿರುವ ಜೀವನವಿಧಾನ ಹಾಗೂ ಮೌಲ್ಯಗಳನ್ನು, ಎಲ್ಲಾ ಬಗೆಯ ಆಕ್ರಮಣಗಳ ಮಧ್ಯೆಯೂ ಉಳಿದುಕೊಂಡು ಬಂದಿರುವ ನೈಸರ್ಗಿಕ ಪರಿಸರ ಇವೆಲ್ಲವನ್ನು ಸಂಪೂರ್ಣ ಬುಡಮೇಲು ಮಾಡುವ ವಿರಾಟ್‌ಶಕ್ತಿ ಇರುವುದರಿಂದಲೇ ಅದನ್ನು ಪ್ರತಿರೋಧಿಸುವ ವೈಚಾರಿಕ ಪ್ರಯತ್ನಗಳು ಕೂಡ ಅತ್ಯಂತ ಸೂಕ್ಷ್ಮವೂ, ಪ್ರಬಲವೂ ಆದ ವೈಚಾರಿಕತೆಯನ್ನು ಬಳಸಿಕೊಳ್ಳಬೇಕಾಗುತ್ತದೆ.”[1]

ಮೇಲಿನ ವಿದ್ವಾಂಸರ ಹೇಳಿಕೆಯನ್ನು ಕುಟುಂಬದ ವಿಷಯದಲ್ಲೂ ಕೂಡಾ ನಾವು ಅನ್ವಯಿಸಿಕೊಳ್ಳಬಹುದು. ಆದರೆ ಇಂದಿನ ಆಧುನಿಕವಾದ ಜಾಗತೀಕರಣವು ‘ಕೊಳ್ಳುಬಾಕ’ ಸಂಸ್ಕೃತಿಯಾದ್ದರಿಂದ ಅದು ಜನರ ಜೀವನದ ವಿಧಾನದಲ್ಲಿ ಅನೇಕ ಸ್ಥಿತ್ಯಂತರಗಳನ್ನು ಮಾಡಿದೆ. ಕುಟುಂಬಗಳು ಇಂದು ಏಕವ್ಯಕ್ತಿ ಪ್ರಧಾನವಾಗಿ ಕುಟುಂಬದಿಂದ ವಿಮುಖರಾಗುತ್ತಿರುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡದ ಕತೆಗಳು ವರ್ತಮಾನದಲ್ಲಿ ಕುಟುಂಬದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಕುರಿತು ಚಿಂತಿಸಿವೆ ಹಾಗೂ ಚರ್ಚಿಸಿವೆ.

**ಸಂಬಂಧಗಳ ನಡುವೆ ಬಂಧದ ಸಡಿಲಿಕೆ**

ಪ್ರಾಚೀನ ಕಾಲದಲ್ಲಿ ಮನುಷ್ಯ ಏಕಾಂಗಿಯಾಗಿ ಇರಲಾರ ಎಂಬ ಕಾರಣಕ್ಕಾಗಿ ಎಲ್ಲರೂ ಒಂದೆಡೆ ನೆಲೆಸಿ ವಾಸಿಸುವ ಕುಟುಂಬದ ಪರಿಕಲ್ಪನೆಯನ್ನು ಕಂಡುಕೊಂಡನು. ಅವಿಭಕ್ತ ಕುಟುಂಬದಲ್ಲಿ ಒಂದೇ ಸೂರಿನಡಿಯಲ್ಲಿ ನೂರಾರು ಜನರು ವಾಸವಿರುತ್ತಿದ್ದರು. ನಂತರದ ವಿಭಕ್ತ ಕುಟುಂಬದಲ್ಲಿ ತಂದೆ–ತಾಯಿ ಮತ್ತು ಮಕ್ಕಳು ಇರುತ್ತಿದ್ದರು. ಆದರೆ ಇಂದು ಎಲ್ಲಾ ರಕ್ತ ಸಂಬಂಧಗಳನ್ನು ಕಳೆದುಕೊಂಡು ಒಬ್ಬಂಟಿಯಾಗಿ ಬದುಕುತ್ತಿರುವ ಸಂದರ್ಭಗಳನ್ನು ಕಾಣಲು ಸಿಗುತ್ತಿದೆ. ಇದಕ್ಕೆ ಮೂಲ ಕಾರಣ ಒಂದು ಬ್ರಿಟಿಷ್ ವಸಾಹತುಶಾಹಿ ನೀತಿ; ಎರಡನೆಯದು ಆಧುನಿಕ ಜಾಗತೀಕರಣದ ನೀತಿಗಳು ಉಂಟು ಮಾಡಿದ ಪರಿಣಾಮಗಳು. ಇದರ ಪರಿಣಾಮವಾಗಿ ಮನುಷ್ಯನು ಇಂದು ಮನುಷ್ಯರೊಂದಿಗೆ ಸಂಬಂಧಗಳನ್ನು ಉಳಿಸುವ, ಬೆಳೆಸುವ ಮನೋಭಾವನೆಯನ್ನು ಮರೆತು ಅವರೊಂದಿಗೆ ಪ್ರೀತಿ, ವಿಶ್ವಾಸ, ನಂಬಿಕೆಯನ್ನು ಕಳೆದುಕೊಳ್ಳುತ್ತಿದ್ದಾನೆ. ಸಂಬಂಧಗಳನ್ನು ಜಾಗತೀಕರಣ ವ್ಯವಸ್ಥೆಯಲ್ಲಿ ಮಾರುಕಟ್ಟೆಯ ಉದ್ದೇಶಗಳಲ್ಲಿನ ಸರಕುಗಳಂತೆ ಬಳಸಿಕೊಂಡು ಬಿಸಾಡುವ ಮನಃಸ್ಥಿತಿಯನ್ನು ತಲುಪಿದ್ದಾನೆ. ಅಲ್ಲದೇ ಸಂಬಂಧಗಳನ್ನು ಮುಖ್ಯವಾಗಿ ತನ್ನ ಧ್ಯೇಯೋದ್ದೇಶಗಳನ್ನು ಈಡೇರಿಸಿಕೊಳ್ಳುವ ಉದ್ದೇಶಕ್ಕಾಗಿ ಮತ್ತು ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುತ್ತಾ ಸಂಬಂಧಗಳ ಅಸ್ತಿತ್ವದ ಮೌಲ್ಯಗಳನ್ನು ಮರೆತಿದ್ದಾನೆ. ಇದು ಕೇವಲ ಕುಟುಂಬಕ್ಕೆ ಮಾತ್ರ ಸೀಮಿತವಾಗದೆ ಕುಟುಂಬದ ಹೊರಗಿನ ಸಂಬಂಧಗಳಲ್ಲೂ ಕೂಡ ಅವನು ಇದೇ ರೀತಿಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಿದ್ದಾನೆ. ಒಟ್ಟಾರೆಯಾಗಿ ಇಂದಿನ ಮಾನವನಿಗೆ ಯಾವುದೇ ಸಂಬಂಧಗಳಿಗೂ ಪ್ರಾಮುಖ್ಯತೆ ಇಲ್ಲ ಎನ್ನುವುದನ್ನು ಕತೆಗಳು ಸ್ಪಷ್ಟವಾಗಿ ಚಿತ್ರಿಸಿವೆ.

ಆಧುನಿಕತೆಯ ಆಗಮನದ ನಂತರದಲ್ಲಿ ಮಧ್ಯಮವರ್ಗ ಉದಯಿಸಿಕೊಂಡು ಇದುವರೆಗೂ ಬೆಳೆದುಬಂದಿದ್ದ ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ಅನೇಕರು ಶಿಕ್ಷಣದ ಕಾರಣಕ್ಕಾಗಿ ಇಲ್ಲವೇ ಉದ್ಯೋಗದ ಕಾರಣಕ್ಕಾಗಿ ಕುಟುಂಬವನ್ನು ಬಿಟ್ಟು ನಗರಗಳಲ್ಲಿ ವಾಸ ಮಾಡುವ ಪ್ರಸಂಗ ಬಂದಿತು. ಇದಕ್ಕೆಲ್ಲಾ ಮೂಲ ಕಾರಣವೆಂದರೆ ಆಧುನಿಕತೆಯ ನಗರೀಕರಣ ವ್ಯವಸ್ಥೆ. ಕೃಷಿ ವ್ಯವಸ್ಥೆಯನ್ನೇ ತಮ್ಮ ಮೂಲ ವೃತ್ತಿಯನ್ನಾಗಿ ನಂಬಿಕೊಂಡು ಜೀವನ ಸಾಗಿಸುತ್ತಿದ್ದ ಕುಟುಂಬ ವ್ಯವಸ್ಥೆಯು ಇಂತಹ ಔದ್ಯೋಗಿಕರಣದ ಫಲವಾಗಿ ಕುಟುಂಬವನ್ನು ತೊರೆದು ವಿಭಕ್ತ ಕುಟುಂಬ ವ್ಯವಸ್ಥೆಯನ್ನು ರೂಪಿಸಿಕೊಳ್ಳತೊಡಗಿದವು. ಅಂದರೆ ಈ ಹಿಂದೆ ಇದ್ದ ಎಲ್ಲಾ ಸಂಬಂಧಗಳನ್ನು ತೊರೆದು ತಂದೆ–ತಾಯಿ, ಮಕ್ಕಳು ಮಾತ್ರ ಒಂದೆಡೆ ನೆಲೆಸಲು ಪ್ರಾರಂಭಿಸಿದರು. ಇದು ವಸಾಹತುಶಾಹಿಯ ಆಗಮನದ ಆಧುನೀಕರಣವು ಕುಟುಂಬ ವ್ಯವಸ್ಥೆಗೆ ತಂದಿಟ್ಟ ಬಹುದೊಡ್ಡ ಪಲ್ಲಟವಾಗಿದೆ.

ಇದರ ನಂತರದಲ್ಲಿ ಜಾಗತೀಕರಣದ ಈ ಸಂದರ್ಭದಲ್ಲಿ ಕುಟುಂಬ ವ್ಯವಸ್ಥೆಯ ಪರಿಕಲ್ಪನೆಯು ಅನೇಕ ಸ್ಥಿತ್ಯಂತರಗಳನ್ನು ಕಂಡುಕೊಂಡಿದೆ. ಕುಟುಂಬ ಎನ್ನುವುದಕ್ಕೆ ಈ ಹಿಂದೆ ಸಮಾಜಶಾಸ್ತ್ರಜ್ಞರು ರೂಪಿಸಿದ್ದ ವ್ಯಾಖ್ಯಾನವನ್ನು

ಪುನರ್ವಿಮರ್ಶಿಸುವ ನಿಟ್ಟಿನಲ್ಲಿ ಇಂದಿನ ಕುಟುಂಬ ವ್ಯವಸ್ಥೆಗಳು ಕಂಡುಬರುತ್ತಿರುವುದನ್ನು ಕನ್ನಡ ಕತೆಗಳು ಮುಖ್ಯವಾಗಿ ಗಮನಿಸಿವೆ. ಇಂದು ತಂದೆ–ತಾಯಿ ಮತ್ತು ಮಕ್ಕಳು ಒಂದೆಡೆ ಇರದೇ ಶಿಕ್ಷಣದ ಕಾರಣಕ್ಕಾಗಿ ಇಲ್ಲವೇ ಉದ್ಯೋಗದ ಕಾರಣಕ್ಕಾಗಿ ಮಕ್ಕಳು ವಿದೇಶದಲ್ಲಿ, ತಂದೆ–ತಾಯಿ ಹಳ್ಳಿ ಇಲ್ಲವೇ ನಗರಗಳಲ್ಲಿ ಬೇರೆ–ಬೇರೆಯಾಗಿ ವಾಸಿಸುವ ಪ್ರಸಂಗಗಳನ್ನು ಕತೆಗಳು ಕಟ್ಟಿಕೊಟ್ಟಿವೆ. ಉದಾಹರಣೆಗೆ ಅಮರೇಶ ನುಗಡೋಣಿ ಅವರ 'ಪಕ್ವಕಲ್ಲದೇ ಪರಿಣಾಮ ಕಾಣಿಸದು' ಕತೆಯಲ್ಲಿ ಶರಭನಗೌಡನ ಪಾತ್ರದ ಮೂಲಕ ವಿಭಕ್ತ ಕುಟುಂಬವು ನಂತರದಲ್ಲಿ ಎಲ್ಲರೂ ತಮ್ಮ ತಮ್ಮ ಶಿಕ್ಷಣದ ಕಾರಣಕ್ಕಾಗಿ; ನಂತರದಲ್ಲಿ ಉದ್ಯೋಗದ ಕಾರಣಕ್ಕಾಗಿ ಹಳ್ಳಿಯನ್ನು ಬಿಟ್ಟು ನಗರವನ್ನು ಸೇರುವ ಚಿತ್ರಣವಿದೆ.

ಕುಟುಂಬದಿಂದ ಇಂದು ಮಕ್ಕಳು ಉದ್ಯೋಗ, ಶಿಕ್ಷಣದ ಕಾರಣಕ್ಕಾಗಿ ಏಕಾಂಗಿಯಾಗಿ ನೆಲೆಸುವ/ವಾಸಿಸುವ ಪರಿಸ್ಥಿತಿಯನ್ನು ಇಂದು ಕಾಣಲು ಸಾಧ್ಯ. ಇಲ್ಲಿ ಶರಭನಗೌಡ ಊರಿನ ಗೌಡನಾಗಿದ್ದು ಅವನ ಹೆಂಡತಿ ಮಕ್ಕಳ ಜೊತೆ ಜಮೀನನ್ನು ಮಾಡಿಕೊಂಡಿದ್ದ. ಮಕ್ಕಳ ಶಿಕ್ಷಣದ ಕಾರಣಕ್ಕಾಗಿ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರದಲ್ಲಿ ಇರುವಂತೆ ವ್ಯವಸ್ಥೆ ಮಾಡಿದ್ದ. ಮಕ್ಕಳನ್ನು ಬಿಟ್ಟಿರದ ತಾಯಿಯೂ ತಾನು ಸಹ ಮಕ್ಕಳೊಂದಿಗೆ ಇರುವುದಾಗಿ ಮಕ್ಕಳೊಂದಿಗೆ ಹೋಗಿ ವಾಸಿಸತೊಡಗಿದಳು. ಹೀಗಾಗಿ ಗೌಡನು ಒಬ್ಬನೇ ಏಕಾಂಗಿಯಾಗಿ ಬದುಕಬೇಕಾದ ಪರಿಸ್ಥಿತಿ ಬಂದಿತು. ಅಂದರೆ ಕತೆಯಲ್ಲಿ ಆಧುನಿಕ ಶಿಕ್ಷಣ ವ್ಯವಸ್ಥೆ ಮತ್ತು ಜಾಗತೀಕರಣದ ಉದ್ಯೋಗದ ಅವಕಾಶಗಳು ಕೂಡುಕುಟುಂಬಗಳನ್ನು ಒಂದೆಡೆ ಇರದಂತೆ ಅವರನ್ನು ಬೇರೆ ಇಡುವ ವ್ಯವಸ್ಥೆಯನ್ನು ಜಾಗೃತ ದೃಷ್ಟಿಕೋನದಿಂದ ರೂಪಿಸತೊಡಗಿವೆ. ಇಲ್ಲಿ ಶರಭನಗೌಡನ ಪಾತ್ರವೂ ಏಕಾಂಗಿಯಾಗಿ ಕುಟುಂಬದ ಪರಿಕಲ್ಪನೆಯೇ ಬೇರೆ ಆಗಿಬಿಡುವ ಸಂದರ್ಭವನ್ನು ಸೂಚಿಸುತ್ತಿದೆ. ಅಲ್ಲದೇ ಕುಟುಂಬವು ಇಲ್ಲಿ ಮುಖ್ಯವಾಗಿ ಎರಡು ಕಾರಣಕ್ಕಾಗಿ ಬೇರೆಯಾಗುತ್ತಿದೆ:

1. ಶಿಕ್ಷಣ
2. ಉದ್ಯೋಗ

ಅಂದರೆ ಕುಟುಂಬಗಳು ಇದ್ದರೂ ಅವರೆಲ್ಲಾ ಒಂದೆಡೆ ವಾಸಿಸದೇ ಮಕ್ಕಳೇ ಬೇರೆಡೆ, ತಂದೆಯೇ ಬೇರೆಡೆ ವಾಸಿಸುವ ಪ್ರಸಂಗಗಳನ್ನು ಕತೆಯು ಸೂಕ್ಷ್ಮವಾಗಿ ಬಿಚ್ಚಿಡುತ್ತಿದೆ. ಜಾಗತೀಕರಣ ಸಂದರ್ಭವು ಇಂದು ಕುಟುಂಬಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಡುವುದನ್ನು ಬಿಟ್ಟು ಕೇವಲ ಶೈಕ್ಷಣಿಕ ಹಾಗೂ ಆರ್ಥಿಕ ಉದ್ದೇಶಗಳಿಗಾಗಿ ಬೇರೆಯಾಗಿ ಬದುಕಬೇಕಾದ ಪರಿಸ್ಥಿತಿಯನ್ನು ಸೃಷ್ಟಿಸಿದೆ.

ಇನ್ನೂ ಕುಟುಂಬದಲ್ಲಿ ಮಕ್ಕಳಾಗಲಿಲ್ಲ ಎನ್ನುವ ಸಮಸ್ಯೆಗೆ ಕುಟುಂಬವೇ ಹೇಗೆ ಅವನತಿಯನ್ನು ಹೊಂದುತ್ತಿದೆ ಎನ್ನುವುದನ್ನು ವಸುಧೇಂದ್ರ ಅವರ 'ಚೇಳು' ಕತೆಯ ಹಿನ್ನೆಲೆಯಲ್ಲಿ ಗುರುತಿಸಬಹುದು. ಮಕ್ಕಳಾಗಲಿಲ್ಲ ಎನ್ನುವುದಕ್ಕೆ ದೈಹಿಕವಾದ

ಅನೇಕ ಸಮಸ್ಯೆಗಳಿರುತ್ತವೆ. ಆದರೆ ನಮ್ಮ ಸಮಾಜದಲ್ಲಿರುವ ಮೂಢನಂಬಿಕೆಯಿಂದಾಗಿ ಮಹಿಳೆಯೊಬ್ಬಳನ್ನು ಈ ಪುರುಷವಾದಿ ಸಮಾಜವು ಲೈಂಗಿಕವಾಗಿ ಬಳಸಿಕೊಂಡು ಶೋಷಣೆಯನ್ನು ಮಾಡುತ್ತಿದೆ ಎನ್ನುವುದನ್ನು ಕತೆಯಲ್ಲಿ ವಿವರಿಸಲಾಗಿದೆ. ಕತೆಯಲ್ಲಿ ಮುಖ್ಯ ಪಾತ್ರವಾದ ವೆಂಕಮ್ಮ ಮತ್ತು ಕೊಮ್ಮಣ್ಣರು ಮದುವೆಯಾಗಿ ಕೊಮ್ಮಣ್ಣರ ತಂದೆ-ತಾಯಿಯ ಜೊತೆಗೆ ವಾಸವಿರುತ್ತಾರೆ. ಇವರಿಗೆ ಮದುವೆಯಾಗಿ ಬಹಳ ವರ್ಷಗಳಾದರೂ ಮಕ್ಕಳಾಗದಿದ್ದರಿಂದ ವೆಂಕಮ್ಮಳನ್ನು ಕೊಮ್ಮಣ್ಣನು ಊರಿಗೆ ಬಂದ ಸಾಧು-ಸಂತರಿಗೆಲ್ಲಾ ತೋರಿಸಿ ತಮಗೆ ಒಂದು ಮಗುವಾಗುವಂತೆ ಕೇಳಿಕೊಳ್ಳುತ್ತಿದ್ದ.

ಅಲ್ಲದೇ ಊರಿಗೆ ಬಂದಿದ್ದ ಭೈರವ ಬಾಬಾನಿಗೆ ಕೊಮ್ಮಣ್ಣ ಬಿಡದೇ ದಿನನಿತ್ಯ ದುರ್ಗಮ್ಮನ ಗುಡಿಗೆ ಹೋಗಿ ಸೇವೆ ಮಾಡಿ ಬರುತ್ತಿದ್ದ. ಆದರೆ ಅವರು ಮೌನವ್ರತ ಹಿಡಿದಿದ್ದರೆಂಬ ನಂಬಿಕೆ ಅವನಲ್ಲಿ ಹೆಚ್ಚಾಯಿತು. ಇವನ ಸೇವೆಯನ್ನು ಕಂಡು ಬಾಬಾ ಒಂದು ದಿನ ಮಣಿದು ಇವನ ಸಮಸ್ಯೆಯನ್ನು ಕೇಳಿ "ಮೂರು ದಿನ ರಾತ್ರಿ ಹನ್ನೆರಡಕ್ಕೆ ವೆಂಕಮ್ಮನೊಬ್ಬಳೇ ಪೂಜೆಗೆ ಬರಬೇಕೆಂದು ಬರೆದು ತೋರಿಸಿದರು."[2] ಮೊದಲ ದಿನ ಪೂಜೆಗೆ ಹೋಗಿ ಬೆಳಗಾಗುವುದರಲ್ಲಿ ಸುಸ್ತಾಗಿ ಬಂದ ವೆಂಕಮ್ಮ ಮತ್ತೆ ತಾನು ಅಲ್ಲಿಗೆ ಹೋಗುವುದಿಲ್ಲವೆಂದು ಹಠ ಹಿಡಿದಳು. ಆದರೆ ಕೊಮ್ಮಣ್ಣ ಅವಳ ಮೇಲೆ ರೇಗಾಡಿ ಪುನಃ ಅವಳನ್ನು ಬಾಬಾನಲ್ಲಿಗೆ ಪೂಜೆಗೆ ಹೋಗಬೇಕೆಂದು ಪೀಡಿಸಿದ. ಅವಳ ಮಾತಿನಿಂದ ಸಂದೇಹಿತನಾದ ಕೊಮ್ಮಣ್ಣ ಅವಳನ್ನು ಹಿಂಬಾಲಿಸಿಕೊಂಡು ಗುಡಿಯ ಹತ್ತಿರ ಹೋದಾಗ ಗರ್ಭಗುಡಿಯಲ್ಲಿ ಬೆತ್ತಲೆಯ ದೇಹ ಉರುಳಾಡುತ್ತಿದ್ದವು. ಸಣ್ಣ ಸಂಶಯ ಬಂದು ನೋಡಿದಾಗ ಕೊಮ್ಮಣ್ಣ ನಡುಗಿದ. ಓಣಿ-ಓಣಿಗಳಲ್ಲಿ ಕೂಗಾಡಿ ನನ್ನ ಹೆಂಡತಿ ಮೋಸ ಮಾಡಿದ್ದಾಳೆ ಎಂದು ರೇಗಾಡಿದ.

ಕೊನೆಗೆ ಬಾಬಾನನ್ನು ಹೊಡೆಯಲು ಹೋಗಿ ನೂಕಿಸಿಕೊಂಡ. ಆದರೂ ಇಡೀ ಊರು ಬಾಬಾನಿಗೆ ಕೈ ಮುಗಿದುಕೊಂಡು ನಿಂತಿತು. ಕೊಮ್ಮಣ್ಣ "ಇವತ್ತಿಗೆ ಈಕಿ ನನ್ನ ಹೆಂಡತಿ ಅಲ್ಲ, ನಾನು ಆಕಿ ಗಂಡ ಅಲ್ಲ"[3] ಎಂದ. ವೆಂಕಮ್ಮನ ಅಪ್ಪ-ಅಮ್ಮ ಮರುದಿನ ಬಂದು ವೆಂಕಮ್ಮಳಿಗೆ 'ಯಾಕೆ ಇಂಥಾ ಹೇಲು ತಿನ್ನೋ ಕೆಲಸ ಮಾಡಿದೆ' ಎಂದಿದ್ದಕ್ಕೆ ವೆಂಕಮ್ಮನಿಂದ ಬಂದ ಉತ್ತರ ಇಡೀ ಸಮಾಜವನ್ನೇ ಪ್ರಶ್ನಿಸುವಂತಿತ್ತು. "ಹೆಂಗೋ ಏನೋ ನಂಗೂ ಮಕ್ಕಳು ಆದರೆ ಸಾಕು ಅಂತ ಅನ್ನಿಸಿತ್ತವ್ವಾ"[4] ಎಂದಳು. ಇಡೀ ಕುಟುಂಬ ವೆಂಕಮ್ಮನನ್ನು ಒಬ್ಬಂಟಿಯನ್ನಾಗಿ ಬದುಕುವಂತೆ ಮಾಡಿತು.

ಅಂದರೆ ಕುಟುಂಬವೊಂದನ್ನು ಹೇಗೆ ಮೂಢನಂಬಿಕೆ, ಆಚರಣೆಗಳು ಹಾಳುಗೆಡವುತ್ತವೆ ಎನ್ನುವುದನ್ನು ಪ್ರಸ್ತುತ 'ಚೇಳು' ಕತೆಯಲ್ಲಿ ಕಾಣಬಹುದು. ಅಲ್ಲದೇ ಮಕ್ಕಳಾಗಲಿಲ್ಲ ಎನ್ನುವುದನ್ನು ಸಾಂಪ್ರದಾಯಿಕ ಹಿನ್ನೆಲೆಯಲ್ಲಿ ನೋಡಿದಾಗ ಅದರಿಂದ ಹೇಗೆ ಮಹಿಳೆಯನ್ನು ಗುರಿ ಮಾಡಿಕೊಂಡು ಪುರುಷವಾದಿ ಸಮಾಜ ನಡೆದುಕೊಳ್ಳುತ್ತದೆ ಎನ್ನುವ ಅಂಶವನ್ನು ಸೂಕ್ಷ್ಮವಾಗಿ ವಿವರಿಸಲಾಗಿದೆ. ಒಂದು ಸಮಾಜವು ಹೇಗೆ ಕುಟುಂಬವನ್ನು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಮುನ್ನೆಡೆಸಬೇಕಾದರೆ ಅದಕ್ಕೆ ತನ್ನದೇ ಆದ ಮಕ್ಕಳು, ವಂಶಾವಳಿಯನ್ನು ರೂಪಿಸಿಕೊಳ್ಳಬೇಕು ಎನ್ನುವ

ಹಂಬಲವನ್ನು ಹೊಂದಿರುತ್ತದೆ. ಆದರೆ ಅಂತಹ ಅತಿಯಾದ ಹಂಬಲವೇ ಈ ಕತೆಯಲ್ಲಿ ಇದ್ದು ಕುಟುಂಬವನ್ನು ಅವನತಿಯತ್ತ ಕೊಂಡೊಯ್ಯುತ್ತದೆ ಎಂಬುದನ್ನು ವಿಶ್ಲೇಷಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಟಿ.ಎಸ್.ಗೊರವರ ಅವರ 'ಕುದರಿ ಮಾಸ್ತರ' ಕತೆಯಲ್ಲಿ ಬರುವ ಒಂದು ಪ್ರಸಂಗವು ಸಹ ಇದೇ ರೀತಿಯಲ್ಲಿ ತಂದೆ-ತಾಯಿಯ ಮಾತನ್ನು ಕೇಳದೇ ಮಗನೊಬ್ಬ ಅಪಪೋಲಿಯಾಗುವ ಪ್ರಸಂಗವನ್ನು ಒಳಗೊಂಡಿದೆ. ಬಸ್ಸಿನಲ್ಲಿ ಪ್ರಯತ್ನಿಸುತ್ತಿದ್ದ ಸ್ವಗತ ಪಾತ್ರದ ನಿರೂಪಣೆಯಲ್ಲಿ ತೊಡಗಿರುವ ಲೇಖಕರು ಪಕ್ಕದ ಸೀಟಿನಲ್ಲಿ ಟಿಕೆಟ್ ತೆಗೆದುಕೊಂಡು ಕುಳಿತ ವ್ಯಕ್ತಿಯೊಬ್ಬ ಕಂಡಕ್ಟರನನ್ನು ನೋಡಿ ಅಳತೊಡಗಿದ. ಅಲ್ಲಿಯೇ ಇದ್ದ ಲೇಡಿ ಪೋಲಿಸ್ ಒಬ್ಬಳು ಯಾಕೆ ಅಳ್ತೀರಿ ಎಂದು ಆತನನ್ನು ಕೇಳಿದಳು. ಆಗ ವ್ಯಕ್ತಿ "ರೊಕ್ಕ-ಗಿಕ್ಕ ಏನ್ ಕಳ್ತನ ಆಗಿಲ್ರೀ ಬಾಯಾರ. ನನ್ ಮಗನೂ ಈ ಕಂಡಕ್ಟರ್‌ನಂತೇ ಇದ್ದ. ಇವನು ಕಂಡಕ್ಟರ್ ಆಗಿ ನಮ್ಮ ಮನೆತನ ನೋಡಿಕೊಂಡು ಹೋಗ್ಬೇಕು ಅನ್ನೋದು ನನ್ನ ಕನಸು ಆಗಿತ್ತು. ಆದ್ರ ಆ ಸೂಳೆಮಗ ನಮ್ಮ ಮಾತು ಕೇಳಲಿಲ್ಲ. ಉಣಿಸಿ ತಿನಿಸಿ ಉಪವಾಸ ವನವಾಸ ಮಾಡಿ ಇಷ್ಟು ಇದ್ದವನ್ನ ಇಷ್ಟು ದೊಡ್ಡವನ್ನ ಮಾಡಿದೆ. ನಾಲ್ಕು ಅಕ್ಷರ ಕಲಿತು ನೌಕರಿ ಮಾಡ್ಲಿ ಅಂತ ಸಾಲಿ ಕಲಿಸಿದೆ. ಆದ್ರ ಅಂವ ಉಡಾಳತನಕ್ಕೆ ಬಿದ್ದು ಹಾಳಾಗ್ತಾನ..."[5] ಅಂತ ಒದ್ದೆ ಮಾತುಗಳಲ್ಲಿ ಹೇಳಿದ.

ಅಂದರೆ ಕತೆಯನ್ನು ಸ್ವಗತ ಪಾತ್ರದಲ್ಲಿಯೇ ಚಿತ್ರಿಸುವ ಲೇಖಕರು ತಂದೆಯೊಬ್ಬ ತನ್ನ ಮಗನು ಹಾಳಾಗುತ್ತಿರುವ ಸಂಗತಿಯನ್ನು ಕುರಿತು ದುಃಖತಪ್ತ ಮನಸ್ಸಿನಿಂದ ತನ್ನ ಅಳಲನ್ನು ತೋಡಿಕೊಳ್ಳುವ ವಿವರಣೆಯನ್ನು ನೀಡುತ್ತಾನೆ. ಅಲ್ಲದೇ ಅವನ ದುಃಖವನ್ನು ಕಂಡು ಲೇಖಕರು ಅವನನ್ನು ಮಾತನಾಡಿಸಬೇಕೆಂದು ಪ್ರಯತ್ನಿಸಿದರೂ ಅದು ಸಾಧ್ಯವಾಗದೇ ಸುಮ್ಮನಾಗುತ್ತಾರೆ. ಲೇಖಕರು ಆ ತಂದೆಯನ್ನು ಮಾತನಾಡಿಸಿದಾಗ ತನ್ನ ಮಗ ಏತಕ್ಕಾಗಿ ಹೀಗಾದನೆಂದು ತಂದೆಯು ವಿವರಿಸುತ್ತಾರೆ. "ಎಲ್ಲಾ ಸಾಕಾಗೇತ್ರಿ. ಅವೇನು ಸಂಭಾಳ್ಸಿಕೊಳ್ರೀ. ಇರು ಒಬ್ಬ ಮಗ ನೌಕರಿ ತಗೊಂಡು ನಾಲ್ಕು ಮಂದಿ ಹೌದೆನ್ನುವಂಗ ಬಾಳೆ ಮಾಡ್ತಾನಂತ ಉಪವಾಸ ವನವಾಸ ಬಿಟ್ಟಯ ಸಾಲಿ ಕಲಿಸಿದೆ. ಹನ್ನೆರಡನೇ ಇಯತ್ತೆಯ ತನಕ ಓದಿದ. ಮುಂದೆ ಓಣಿ ಹುಡುಗರ ಜೊತೆ ಉಡಾಳತನಕ್ಕೆ ಬಿದ್ದ. ಇಸ್ಪೀಟ್ ಆಡಾಕತ್ಯಾನ. ಹೀಂಗ ಜೂಜಾಡ್ತನಂತ ಅಂವನ ನಯಾಪೈಸೆ ರೊಕ್ಕ ಕೊಡಲಿಲ್ಲ ಹೀಂಗರ ಆಗಿ ಅಂವ ಇಸ್ಪೀಟ್ ಆಡೋದು ಬಿಡ್ಲಿ ಅಂತ ನಾ ಮಾಡಿದ್ದೆ. ಆದ್ರ ಆ ಸೂಳೆಮಗ ಊರಾಗ ಕಳ್ಳತನ ಮಾಡಕತ್ತಾನಂತೆ. ನನ್ನಂತವರ ಹೊಟ್ಯಾಗ ಎಂತಾ ಮಗ ಹುಟ್ಯಾನ ಎಂತಾ ಮಗ ಹುಟ್ಯಾನ ನೋಡ್ರಿ. ನನ್ಗ ಅಂವನ ಮುಖ ನೋಡಾಕ ಹೇಸ್ಗಿ ಆಗೇತಿ"[6] ಎಂದು ಹೇಳುತ್ತಾನೆ.

ಅಂದರೆ ಮಗನೊಬ್ಬನ ಇಂತಹ ಕೃತ್ಯಗಳಿಂದ ಕುಟುಂಬವೊಂದು ಒಡೆದುಹೋಗುವ, ಕುಟುಂಬಕ್ಕೆ ಕೆಟ್ಟ ಹೆಸರು ಬರುವ ಸಂಗತಿಯೊಂದನ್ನು ಕತೆಯು ಪ್ರಸ್ತಾಪಿಸುತ್ತದೆ. ಅಂದರೆ ತಂದೆಯೊಬ್ಬ ಮಗನ ಕೆಟ್ಟ ಸಂಗತಿಗಳನ್ನು ತಿಳಿದು

ನೊಂದುಕೊಳ್ಳುವ ವಿಚಾರವು ಕುರಿತು ಕತೆಯ ಮುಖ್ಯ ಕೇಂದ್ರವಾಗಿದೆ. ಕುಟುಂಬವೊಂದು ಸಮಾಜದಲ್ಲಿ ಕಂಡುಬರುವ ವ್ಯವಸ್ಥೆಯಿಂದ ಕೂಡಿದ್ದು, ಅದರ ಮುಖ್ಯ ಅಂಶವಾದ ವಂಶಾವಳಿಯೊಂದು ಸಮಾಜದಲ್ಲಿ ಗೌರವವನ್ನು ಕಾಪಾಡಿಕೊಂಡಿರುತ್ತದೆ. ಅಲ್ಲದೇ ಮಗನೊಬ್ಬ ಹಾಳಾಗುತ್ತಿರುವುದನ್ನು ಕಂಡು ತಂದೆಯೊಬ್ಬ ಮರುಗುವ ಸ್ಥಿತಿಯನ್ನು ಕುರಿತದ್ದಾಗಿದೆ.

ಎಂ.ಎಸ್.ವೇದಾ ಅವರ 'ಪಾಲು' ಕತೆಯು ತಾಯಿಯೊಬ್ಬಳು ಹೆತ್ತು ಹೊತ್ತು ಬೆಳೆಸಿದ ಮಕ್ಕಳು ವಯಸ್ಸಿಗೆ ಬಂದ ನಂತರದಲ್ಲಿ ಅವರ ಕುಟುಂಬ, ಅವರ ಹೆಂಡತಿ–ಮಕ್ಕಳು ಎಂದು ಹೆತ್ತವರನ್ನು ಬಿಟ್ಟು ಬೇರೆಯಾಗುವ ಚಿತ್ರಣವು ಕತೆಯಲ್ಲಿದೆ. ಮಕ್ಕಳು ತಾಯಿಯ ಮೇಲಿನ ಪ್ರೀತಿಯನ್ನು ಬಿಟ್ಟು ಆಸ್ತಿಯನ್ನು ಕೇಳುವ ಚಿತ್ರಣ ಈ ಕತೆಯದ್ದಾಗಿದೆ. ತಾಯವ್ವನಿಗೆ ಎರಡು ಗಂಡು ಒಂದು ಹೆಣ್ಣು ಮಗಳು. ದೊಡ್ಡಮಗ ಹೆಂಡತಿಯೊಂದಿಗೆ ಬೇರೆ ವಾಸವಾಗಿದ್ದ. ಚಿಕ್ಕಮಗ ಸಿದ್ಲಿಂಗುವಿಗೆ ಚಂದವ್ವನ ಜೊತೆ ಮದುವೆ ಮಾಡಿ ತಂದ ನಂತರದಲ್ಲಿ ಅವನೂ ತಾಯಿಯಿಂದ ನಿಧಾನವಾಗಿ ದೂರವಾಗುತ್ತಿದ್ದಾನೆ ಎಂಬ ಭಾವನೆಯು ತಾಯವ್ವನದು. ಇದಕ್ಕೆ ಚಂದವ್ವನೂ ಅವನಿಗೆ ಹೇಳಿಕೊಡುತ್ತಿದ್ದಾಳೆ ಎನ್ನುವ ನೋವು ತಾಯವ್ವನನ್ನು ಕಾಡುತ್ತಿತ್ತು. ಇದೇ ಕಾರಣಕ್ಕೆ ಮಗ ಸಿದ್ಲಿಂಗು ಮತ್ತು ಚಂದವ್ವನ ಮೇಲೆ ತಾಯವ್ವ ಕೋಪವನ್ನು ತೋರ್ಪಡಿಸುತ್ತಿದ್ದರೂ ಸಿದ್ಲಿಂಗುವಿನ ಮೇಲಿನ ಪ್ರೀತಿ ಕಡಿಮೆಯಾಗಿರಲಿಲ್ಲ.

"ಮಗನನ್ನು ಒಂದು ವಾರದಿಂದ ನೋಡಲು ಆಗದಿದ್ದ ತಾಯವ್ವ ಈಗ ಮಗ ವಾರದಲ್ಲಿಯೇ ಅರ್ಧಕ್ಕಿಂತ ಹೆಚ್ಚು ಇಳಿದುಹೋಗುತ್ತಾನೆಂದು ಭಾವಿಸಿ, ಮಗನನ್ನು ಸೊಸೆಯ ಸುಪರ್ಧಿಗೆ ಪೂರ್ಣ ವಹಿಸಿಕೊಟ್ಟರೆ ಅವಳು ಅವನ ಸೂತ್ರದ ಬೊಂಬೆಯ ಮಾಡಿ ಊರೂರ ಸಂತೇಲಿ ಆಟ ಆಡಿಸದೇ ಬಿಟ್ಟಾಳೇ ಎಂಬ ಆತಂಕ ತಾಯವ್ವನದು".[7] ಮಕ್ಕಳು ತಮಗೆ ಏನೇ ಮಾಡಿದರೂ ಅವಳ ಸೌಖ್ಯವನ್ನೇ ಬಯಸುವ ತಾಯಿಯ ಪ್ರೀತಿ, ಕಾಳಜಿಯನ್ನು ಮರೆತು ಮಕ್ಕಳಾದ ಸಿದ್ಲಿಂಗು, ಹಿರಿಮಗ ಶಿವಲಿಂಗ ಅದನ್ನು ಮರೆತು ತಮ್ಮ ವೈಯಕ್ತಿಕ ಕಾಳಜಿಯನ್ನು ಮುನ್ನೆಲೆಗೆ ತರುತ್ತಾರೆ.

"ಆಹಾ ನಾಯಕ್‌ಸಾನ್ ಬಡ್ಡೀರು. ಅವ್ರವ್ರ ಮಕ್ಳು ಅವ್ರವ್ರ ತಾವೇ ಇರಬೇಕಂತೆ. ನನ್ನ ಮಕ್ಳು ನನ್ನ ಕಣ್ಣಿಂದ ದೂರಾಗಂಗೆ ಅಡ್ಡಗೋಡೆ ಮಾತ್ರ ನೆಡಬೇಕು ಅಂತರಾಲ್ಲಪ್ಪ ಗ್ರಾಸ್ತರು. ಅವ್ರ ಹಟ್ಟಿ ಹಾಳಾಗ ಅವ್ರಗ್ ಮರಣ ಬರಾ. ಆಪತ್ ಬಂದ್ ಚಾಪೇಲಿ ಸುತ್‌ಕಂಡ್ ಹ್ವಾಗ. ಅಪ್ಪಾ ಸತ್ ಮಕ್ಕಾ ಯೆಮ್ಮೆ ಮೇಯ್ವ ಮೈಸೂರಾ ಬೀದಿಬೀದಿ ಅಲ್ದು ಮೊಸ್ರ, ಬೆಣ್ಣೆ ಮಾರಿ ಮಾರಿ ಸಾಕೀವ್ನಿ ಕಣ್ರೆಲೆ ಭೊಸುಡಿರಾ. ಆನೆಸೂರರಿಗೆ ಇರಾ ನನ್ನ ಮಕ್ಳ ನನ್ನಿಂದ ದೂರ ಮಾಡಾರಂತೆ. ಅವ್ರವ್ರ ಮಕ್ಳು ಅವ್ರವ್ರ ತಾವೇ ಇರಬೈಕಂತೆ ಅವ್ರಗೊಂದು ನ್ಯಾಯ,, ನನಗೊಂದು ನ್ಯಾಯ. ಶ್ರೀಕಂಠೇಶ್ವರಾ ನೀನೆ ಕಂಡಕಪ್ಪಾ"[8] ಎಂದು ತಾಯಿಯು ಹೇಳುವ ಮಾತು ಇಂದು ಕುಟುಂಬದಲ್ಲಿ ಮಕ್ಕಳು ಹೆಂಡತಿ ಬಂದ ನಂತರ ಸೊಸೆಯಿಂದಿರು ಮಕ್ಕಳನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳುತ್ತಿರುವ ರೀತಿಯನ್ನು ಚಿತ್ರಿಸುತ್ತಿದೆ.

ಅಲ್ಲದೇ ತಾಯಿಯಿಂದ ಬೇರೆಯಾಗುವ ಸನ್ನಿವೇಶ ಬಂದಾಗ ಆಸ್ತಿಯ ವಿಚಾರಕ್ಕೆ ತಾನು ದುಡಿದು ಸಂಪಾದಿಸಿ ಗಳಿಸಿದ ಆಸ್ತಿಯನ್ನು ಅವಳು ಭಾಗ ಮಾಡಲು ಸಿದ್ಧ. ಆದರೆ ಅವಳು ತಲೆಬಾಗಿಲಿನ ವಿಚಾರಕ್ಕೆ ಬಂದಾಗ ಮಾತ್ರ ಅವಳದ್ದು ತಕರಾರು. ಆದರೆ ಅವಳ ಮಾತನ್ನು ಕೇಳದೇ ಅದಕ್ಕೆ ಖರ್ಚಾಗಿರುವ ದುಡ್ಡನ್ನು ಕೊಡುತ್ತೇವೆಂದು ಹೇಳುವ ಮಕ್ಕಳನ್ನು ಕಂಡಾಗ ನಿಜಕ್ಕೂ ಅವಳಿಗೆ ಅರಗಿಸಿಕೊಳ್ಳಲಾಗಲಿಲ್ಲ. ಮಾನವೀಯತೆಯನ್ನು ಮರೆತ ಮಕ್ಕಳು ಕೆಲವು ಮನುಷ್ಯ ಸಹಜವಾಗಿ ವಸ್ತುಗಳ ಮೇಲೆ ಇಟ್ಟಿರಬಹುದಾದ ಪ್ರೀತಿಯನ್ನು ಅರ್ಥ ಮಾಡಿಕೊಳ್ಳಲಾರದ ಅವರ ಮೇಲೆ ತಾಯವ್ವಳಿಗೆ ಅಸಹ್ಯವೆನಿಸಿಬಿಡುತ್ತದೆ. ಇಲ್ಲಿ ಪ್ರಮುಖವಾಗಿ ಆಸ್ತಿಯ ಹಂಚಿಕೆಯಲ್ಲಿ ಮಾದೇವಿಗೆ ಏಕೆ ಕೊಡಬೇಕು? ಅವಳಿಗೆ ಮದುವೆಯನ್ನು ಮಾಡಿಲ್ಲವಾ? ಎಂಬ ಪ್ರಶ್ನೆಯನ್ನು ಈ ಮಕ್ಕಳು ಕೇಳುತ್ತಾರೆ. ಈ ಹಿನ್ನೆಲೆಯಲ್ಲಿ ಆಸ್ತಿಯನ್ನು ಪಡೆಯುವಲ್ಲಿ ಗಂಡುಮಕ್ಕಳಿಗೆ ಮಾತ್ರ ಹಕ್ಕಿದೆ ಎಂಬ ಸಂಪ್ರದಾಯವಾದಿ ನಿಲುವನ್ನು ತಾಯವ್ವ ಪ್ರಶ್ನಿಸುತ್ತಾಳೆ.

ಇಡೀ ಕುಟುಂಬವು ಇಂದು ಗ್ರಾಮೀಣ ಪ್ರದೇಶಗಳಲ್ಲೂ ಛಿದ್ರಛಿದ್ರವಾಗುತ್ತಿರುವುದನ್ನು ಕತೆಯ ಮೂಲಕ ಗುರುತಿಸಲಾಗಿದೆ. ಹೆತ್ತು ಹೊತ್ತು ಸಾಕಿದವರನ್ನು ಬಿಟ್ಟು ಹೆಂಡತಿಯ ಮಾತನ್ನು ಕೇಳುವ ಮಗನ ಕಾರಣಕ್ಕಾಗಿ ಬೇರೆಯಾಗುವ ಕುಟುಂಬ ವ್ಯವಸ್ಥೆಯು ವೈಯಕ್ತಿಕ ಸ್ವಾರ್ಥಕ್ಕೆ ಬಲಿಯಾಗುತ್ತಿರುವುದನ್ನು ಚಿತ್ರಿಸುತ್ತಿದೆ. ಮಾದೇವಿಯು ತಂಗಿ ಎನ್ನುವ ಭಾವನೆಯನ್ನು ಮರೆತು ಗಂಡನನ್ನು ಬಿಟ್ಟು ಬಂದಿದ್ದರೂ ಅವಳ ಮೇಲೆ ಅವರು ತೋರದಿರುವ ಕಾಳಜಿಯನ್ನು ತಾಯವ್ವ ಪ್ರಶ್ನಿಸುತ್ತಾಳೆ. ಮುಖ್ಯವಾಗಿ ಆಸ್ತಿಯೆನ್ನುವುದು ಪುರುಷನ ಸ್ವತ್ತು ಎನ್ನುವುದನ್ನು ಮಾದೇವಿಯ ಮೂಲಕ ಕತೆಯಲ್ಲಿ ನಿರೂಪಿಸಲಾಗಿದೆ. ವೈಯಕ್ತಿಕ ಹಿತಾಸಕ್ತಿ, ಲಾಭ, ಆಸ್ತಿಗಾಗಿ ಕುಟುಂಬವು ಒಡೆದುಹೋಗುತ್ತಿರುವುದನ್ನು ಕತೆಯು ವಿವರಿಸುತ್ತಿದೆ.

ಒಟ್ಟಿನಲ್ಲಿ ಕನ್ನಡದ ಕತೆಗಳು ಕುಟುಂಬ ಎನ್ನುವ ಪರಿಕಲ್ಪನೆಯನ್ನು ಈ ಹಿಂದೆ ಸಮಾಜಶಾಸ್ತ್ರವು ವಿವರಿಸಿದ್ದ ಹೇಳಿಕೆಗೆ ಪರ್ಯಾಯವಾಗಿ ಇರುವುದನ್ನು ಸ್ಪಷ್ಟವಾಗಿ ಕಟ್ಟಿಕೊಡುತ್ತಿವೆ. ಕುಟುಂಬ ಎಂದರೆ ವ್ಯಕ್ತಿಯೊಬ್ಬನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಹೆಚ್ಚಿನ ನೈತಿಕ ಮತ್ತು ಸಾಮಾಜಿಕ ಶಕ್ತಿಸಾಮರ್ಥ್ಯವನ್ನು ನೀಡುತ್ತದೆ. ಒಬ್ಬರಿಗೊಬ್ಬರು ನೆಲೆಯಾಗಿ ನಿಲ್ಲುವ ಕುಟುಂಬದ ಜನರು ಇಂದು ಆಸ್ತಿ, ಹಣ, ವೈಯಕ್ತಿಕ ಲಾಭಕ್ಕಾಗಿ ಎಲ್ಲವನ್ನು ಮರೆತು ಕುಟುಂಬವನ್ನು ದೂರ ಮಾಡುತ್ತಿವೆ ಎನ್ನುವುದನ್ನು ತಿಳಿಸಿವೆ.

**ಕೊನೆ ಟಿಪ್ಪಣಿಗಳು:**

1. ರಾಜೇಂದ್ರ ಚೆನ್ನಿ ಮತ್ತು ಸಿರಾಜ್ ಅಹಮದ್ ಎಸ್. (ಸಂ), (2004), ಜಾಗತೀಕರಣ: ಒಂದು ಸಮಗ್ರ ಮಂಥನ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ, ಪು.ಸಂ. 1
2. ವಸುಧೇಂದ್ರ, (2010), ಚೇಳು, ಬೆಂಗಳೂರು: ಛಂದ ಪುಸ್ತಕ, ಪು.ಸಂ. 7
3. ಅದೇ, ಪು.ಸಂ. 8
4. ಅದೇ, ಪು.ಸಂ. 8
5. ಗೊರವರ ಟಿ.ಎಸ್., (2012), ಕುದರಿ ಮಾಸ್ತರ, ಚನ್ನಪಟ್ಟಣ: ಪಲ್ಲವ ಪ್ರಕಾಶನ, ಪು.ಸಂ. 20
6. ಅದೇ, ಪು.ಸಂ. 22
7. ವೇದಾ ಎಂ.ಎಸ್., (2010), ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, ಮೈಸೂರು: ಸಂವಹನ ಪಬ್ಲಿಕೇಷನ್ಸ್, ಪು.ಸಂ. 189
8. ಅದೇ, ಪು.ಸಂ. 196

**ಪರಾಮರ್ಶನ ಗ್ರಂಥಗಳು:**

1. ರಾಜೇಂದ್ರ ಚೆನ್ನಿ ಮತ್ತು ಸಿರಾಜ್ ಅಹಮದ್ ಎಸ್. (ಸಂ), (2004), ಜಾಗತೀಕರಣ: ಒಂದು ಸಮಗ್ರ ಮಂಥನ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
2. ಗೊರವರ ಟಿ.ಎಸ್., (2012), ಕುದರಿ ಮಾಸ್ತರ, ಚನ್ನಪಟ್ಟಣ: ಪಲ್ಲವ ಪ್ರಕಾಶನ.
3. ವಸುಧೇಂದ್ರ, (2010), ಚೇಳು, ಬೆಂಗಳೂರು: ಛಂದ ಪುಸ್ತಕ.
4. ವೇದಾ ಎಂ.ಎಸ್., (2010), ಎಂ.ಎಸ್.ವೇದಾರ ಸಣ್ಣಕತೆಗಳು ಈತನಕ, ಮೈಸೂರು: ಸಂವಹನ ಪಬ್ಲಿಕೇಷನ್ಸ್.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.